ಒಟ್ಟಿದ ಕಟ್ಟಿಗೆಯ ಬೆಂಕಿ ಆವರಿಸುವ ಮುನ್ನವೇ ಸುಟ್ಟು ಖಲಾಸಾದ ಗುಬ್ಬಿ ಮರಿಯಂತಹ ಅವ್ವ ನೆನಪಿಗೆ ಬಂದಳು. ದಿಕ್ಕಿಲ್ಲದ ಮನೆಗೆ ಗಂಡ ಮಕ್ಕಳೊಡನೆ ಬಂದು ನಿಂತಿದ್ದ ಅಕ್ಕ ತ್ರಿವೇಣಿ ಕಣ್ಣ ಮುಂದೆ ಬಂದಳು. ಅದೇಟು ಜನರನ್ನ ಕಾಡಿದ ಈ ಮನುಷ್ಯ ಅಂತ ನಿಡುಸುಯ್ದು ಊರ ದಾರಿ ಹಿಡಿದಿದ್ದ. ಹಾಗೆ ಹೋಗುವಾಗಲೂ ಊರಲಿ ಹೇಗೆ ತಲೆ ಎತ್ತಿ ಮಾತಾಡುವದು, ಚುಚ್ಚುವ ಕಣ್ಗಳನ್ನ ಹೇಗೆ ಎದುರಿಸುವದು ಅಂತ ಯೋಚಿಸುತ್ತಲೇ ಇದ್ದ. ಕೊಲೆಗಾರನ ಮಗ, ಕಳ್ಳನ ಮಗ ಅಂದರೂ ಸರಿಯಿತ್ತು. ಆದರೆ, ಹೀಗೆ ಕಂಡ ಹುಡುಗರೊಂದಿಗೆ ಮಲಗಿ ಹೆಣ್ಣಾಗುವ ಅಪ್ಪನನ್ನ ಏನು ಮಾಡುವುದು ಎಂಬ ಯೋಚನೆ ಬರುತ್ತಲೇ ಕಣ್ಣಲ್ಲಿ ನೀರಾಡಿದ್ದವು.





ಆದರೆ, ವಾದಿ ಬರುವ ಹೊತ್ತಿಗಾಗಲೇ ಅಪ್ಪ ಸತ್ತಿದ್ದ! ವಿಷವೆಂಬುದು ದೇಹವಿಡೀ ವ್ಯಾಪಿಸಿ ಜೀವ ಬಿಟ್ಟರು ಅಂತ ಪೋಸ್ಟ್ ಮಾರ್ಟಮ್ ರಿಪೋರ್ಟಿನಲ್ಲಿತ್ತು. ಆದರೆ, ಯಾವ ವಿಷ!? ವಾದಿ ತಲೆ ಕೊಡವಿದ.

''ಮೈತುಂಬ ಸಾಲ ಮಾಡಿಕೊಂಡಿದ್ದ, ಅದಕ್ಕೆ ಹಿಂಗ್ ಮಾಡಿಕೆಂಡ'' ಅಂತ ಸೋದರಮಾವ ಮುರುಳಿ ಊರಮಂದಿ ಮುಂದ ಅಲವತ್ತುಕೊಳ್ಳುತ್ತಿದ್ದರು. ಎಲ್ಲಿತ್ತು ಸಾಲ ಎಂದು ತೆಗೆಸಿ ನೋಡಿದರೆ, ಲಕ್ಷ ಲಕ್ಷಗಳನ್ನು ಅಪ್ಪ ತಮ್ಮ ಅಕೌಂಟಿನಲ್ಲಿ ಬಿಟ್ಟು ಹೋಗಿದ್ದರು. ಪಾಪ, ಮಾವನಿಗೂ ಸರಿಯಾದ ಕಾರಣ ಹೇಳಲು ಹೊಳೆಯದೆ ತಿಪ್ಪೆ ಸಾರಿಸಿದ್ದರು.

ಅಪ್ಪನ ಅಂತಿಮ ಸಂಸ್ಕಾರಕ್ಕೆ ಸೇರಿದ ಜನರನ್ನ ನೋಡಿ ವಾದಿ ದಂಗು ಬಡಿದಿದ್ದ. ಊರ ಓಣಿ ಕಿಕ್ಕಿರಿದು ಮನೆಯಿಂದ ಕುಣಿ ತೋಡಿದ ಹೊಲದವರೆಗೆ ಇರುವೆ ಸಾಲಿನಂತೆ ಜನ ಸಾಗಿದ್ದರು.

ಸ್ಥಳೀಯ ಎಮ್ಮೆಲ್ಲೆಯಿಂದ ಹಿಡಿದು ಕೇಂದ್ರದ ಮಂತ್ರಿಯವರೆಗೆ ಹತ್ತಾರು ಜನ ಬಂದು ಹಾರ ಹಾಕಿ ಗುಣಗಾನ ಮಾಡಿ ಹೋದರು. ಸಹಾಯ ಕೇಳಿ ಬಂದ ಯಾರನ್ನೂ ಬರಿಗೈಲಿ ಕಳಿಸಿದ ಉದಾಹರಣೆ ಇರಲಿಲ್ಲ. ಅದೊಂದು ಐಬು ಇರದೆ ಹೋಗಿದ್ದರೆ ಅಪ್ಪ ಎಲ್ಲೋ ಇರುತ್ತಿದ್ದರು ಅಂತ ಮೊದಲ ಸಲ ಅನಿಸಿತ್ತು.

ಅಪ್ಪ ಸತ್ತು ವರ್ಷ ಪೂರ್ಣಗೊಂಡಿಲ್ಲ, ಬಳ್ಳಾರಿಯಿಂದ ಬಂದಿದ್ದ ವಾದಿ ವಾಪಸ್ಸು ಹೋಗದೆ